**ಇಂದು ದಿನಾಂಕಃ 24-03-2025 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ವಾದಿ ಪರವಾಗಿ ಶ್ರೀ ಎಮ್.ಎಸ್.ಎಸ್. ವಕೀಲರಿಂದಃ-**

ದಾವಾ ಆಸ್ತಿ ನೊಂದಣಿ ಮಾಡುವ ಸಮಯಕ್ಕೆ ದಾವಾ ಆಸ್ತಿಯ 14 ವರ್ಷಗಳ ದಾಖಲೆಗಳನ್ನು ನೋಡಿದ್ದೇನೆ. 14 ವರ್ಷಗಳ ದಾಖಲೆ ಯಾವ ವರ್ಷದಿಂದ ಯಾವ ವರ್ಷದವರೆಗೆ ನೋಡಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ಓದು ಬರಹ ಬರುವುದಿಲ್ಲ ಆದ್ದರಿಂದ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮಗೆ ಓದು ಬರಹ ಬರದಿದ್ದರೆ ನೀವು ನೊಂದಣಿ ಮಾಡುವ ಸಮಯಕ್ಕೆ ದಾವಾ ಆಸ್ತಿ ಯಾರಾ ಹೆಸರಿನಲ್ಲಿ ಇತ್ತು ಎಂದು ನಿಮಗೆ ಗೊತ್ತಿಲ್ಲ ಎಂದು ಸೂಚಿಸಿದಾಗ ಸಾಕ್ಷಿ 3ನೇ ಪ್ರತಿವಾದಿ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ಎಷ್ಟು ವರ್ಷಗಳ ಕಾಲ ದಾವಾ ಆಸ್ತಿ 3ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದು ಪ್ರಶ್ನಿಸಿದಾಗ ಸಾಕ್ಷಿ 14 ವರ್ಷಗಳ ಕಾಲ ಇತ್ತು ಎಂದು ನುಡಿಯುತ್ತಾರೆ. ನಿಡಿ-1 ರ ದಾಖಲೆ 2009 ರಲ್ಲಿ ನೊಂದಣಿಯಾಗಿದೆ. 2009 ರ 14 ವರ್ಷಗಳ ಮೊದಲಿನಿಂದ ದಾವಾ ಆಸ್ತಿ 3ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. 2009 ರ 14 ವರ್ಷಗಳ ಮೊದಲು ದಾವಾ ಆಸ್ತಿಯ ಮಾಲೀಕರು ಯಾರು ಇದ್ದರು ಎಂದು ಪ್ರಶ್ನಸಿದಾಗ ಸಾಕ್ಷಿ 2ನೇ ಪ್ರತಿವಾದಿಯ ಹೆಸರಿನಿಂದ 3ನೇ ಪ್ರತಿವಾದಿಗೆ ವರ್ಗಾವಣೆಯಾಗಿದೆ ಎಂದು ನುಡಿಯುತ್ತಾರೆ.

2ನೇ ಪ್ರತಿವಾದಿಯ ಹೆಸರಿನಿಂದ 3ನೇ ಪ್ರತಿವಾದಿಯ ಹೆಸರಿಗೆ ಯಾವ ರೀತಿ ವರ್ಗಾವಣೆಯಾಗಿದೆ ಎಂದು ಪ್ರಶ್ನಿಸಿದಾಗ ಸಾಕ್ಷಿ ತಂದೆಯ ಆಸ್ತಿ 3ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿದೆ ಎಂದು ನುಡಿಯುತ್ತಾರೆ. ವರ್ಗಾವಣೆ ಮಾಡಿಕೊಡುವಂತೆ ಯಾವುದಾದರೂ ದಾಖಲೆಗಳನ್ನು ನೋಡಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಯಾವುದೇ ಉತ್ತರ ನೀಡುವುದಿಲ್ಲ. ದಾವಾ ಆಸ್ತಿಯ ಮೂಲ ಮಾಲೀಕರು 2ನೇ ಪ್ರತಿವಾದಿಯ ತಂದೆ ನಾಗಪ್ಪ ಎಂದರೆ ಸರಿ. ನಾಗಪ್ಪರವರಿಗೆ ಗಂಡು ಮಕ್ಕಳು ಇಲ್ಲದೇ ಇರುವ ಕಾರಣ ಅವರು 1ನೇ ಪ್ರತಿವಾದಿರವರಿಗೆ ದತ್ತಕ್ಕೆ ಪಡೆದಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿಗೆ ಎಷ್ಟು ಜನ ಮಕ್ಕಳು ಎಂದರೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು ಎಂದು ನುಡಿಯುತ್ತಾರೆ. ಅವರ ಹೆಸರು ವಿರೂಪಾಕ್ಷಪ್ಪ, ಬಸವರಾಜ ಮತ್ತು ಚಂದ್ರಕಲಾ. 3ನೇ ಪ್ರತಿವಾದಿಯಿಂದ ನಾನು ದಾವಾ ಆಸ್ತಿಯನ್ನು ನೊಂದಣಿ ಮಾಡಿಕೊಳ್ಳುವ ಸಮಯಕ್ಕೆ ಬಸವರಾಜ ಮತ್ತು ಚಂದ್ರಕಲಾ ಜೀವಂತ ಇದ್ದರು. ಬಸವರಾಜರವರು ಈಗ ಮೃತಪಟ್ಟಿರುತ್ತಾರೆ. ಬಸವರಾಜರವರು ಮೃತಪಟ್ಟು ಎಷ್ಟು ವರ್ಷಗಳು ಆಗಿವೆ ಎಂದು ನನಗೆ ಗೊತ್ತಿಲ್ಲ.

2ನೇ ಪ್ರತಿವಾದಿಯ ಗಂಡ, ಮಕ್ಕಳು ಹಾಗೂ ಮೊಮ್ಮಕ್ಕಳು ತಮ್ಮ ಕುಟುಂಬದ ಆಸ್ತಿಗಳನ್ನು ಪಾಲುಗಾರಿಕೆ ಮಾಡಿಕೊಂಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. 2ನೇ ಪ್ರತಿವಾದಿಯ ಗಂಡ, ಮಕ್ಕಳು ಹಾಗೂ ಮೊಮ್ಮಕ್ಕಳು ಈಗ 50 ವರ್ಷಗಳಿಂದ ಒಂದೇ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿಯ ಮಕ್ಕಳ ಮದುವೆ 20 ವರ್ಷಗಳ ಹಿಂದೆಯೇ ಆಗಿದೆ ಎಂದರೆ ಸಾಕ್ಷಿ ಯಾವುದೇ ಉತ್ತರ

ನೀಡುವುದಿಲ್ಲ. 1 ಮತ್ತು 2ನೇ ಪ್ರತಿವಾದಿಯರು 30-40 ವರ್ಷಗಳಿಂದ ಹೋಟೆಲ ವ್ಯಾಪಾರ ಮಾಡುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಗೆ ಓದು ಬರಹ ಬರುವುದಿಲ್ಲ ಮತ್ತು ಅನಕ್ಷರಸ್ತಳು ಇದ್ದಾಳೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿ ಅನಕ್ಷರಸ್ತಳು ಇದ್ದ ಕಾರಣ ಅದರ ಲಾಭವನ್ನು ಪಡೆದು ದಾವಾ ಆಸ್ತಿಯನ್ನು 2ನೇ ಪ್ರತಿವಾದಿ ಹೆಸರಿನಿಂದ ನಾನು ಮತ್ತು 2ನೇ ಪ್ರತಿವಾದಿ ಸೇರಿ 3ನೇ ಪ್ರತಿವಾದಿ ಹೆಸರಿನಲ್ಲಿ 2ನೇ ಪ್ರತಿವಾದಿಗೆ ಗೊತ್ತಿಲ್ಲದೆ ವರ್ಗಾವಣೆ ಮಾಡಿದ್ದೇವೆ ಎಂದರೆ ಸರಿಯಲ್ಲ.

**ನ್ಯಾಯಾಲಯದ ಸಮಯ ಮುಗಿದ ಕಾರಣ ಪಾಟೀ ಸವಾಲು ಮುಂದೂಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**